# All India Radio: Bangalore
# National Bulletin In Kannada
# 04.05.2025 / 7.35 am

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು</u>

೧. ಪಾಕಿಸ್ತಾನದ ಹಡಗುಗಳು ಭಾರತೀಯ ಬಂದರುಗಳಿಗೆ ಪ್ರವೇಶ ನಿಷೇಧಿಸಿದ ಶಿಪ್ಪಿಂಗ್ ನಿರ್ದೇಶನಾಲಯ

೨. ಅಂಗೋಲಾದ ಸಶಸ್ತ್ರ ಪಡೆಗಳ ಆಧುನೀಕರಣ ಬೆಂಬಲಿಸಲು ಭಾರತದಿಂದ ೨೦೦ ಮಿಲಿಯನ್ ಡಾಲರ್ ರಕ್ಷಣಾ ಸಾಲ ಘೋಷಣೆ

೩. ವೇವ್ಸ್ ಶೃಂಗಸಭೆಗೆ ಇಂದು ತೆರೆ; ಚಲನಚಿತ್ರ ನಿರ್ಮಾಣ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರಮುಖ ಆಕರ್ಷಣೆ

೪. ದೇಶದ ಐದು ಸಾವಿರ ಕೇಂದ್ರಗಳಲ್ಲಿ ಮತ್ತು ವಿದೇಶದ ೧೩ ನಗರಗಳಲ್ಲಿ ಇಂದು ನೀಟ್ ಯುಜಿ ಪರೀಕ್ಷೆ

೫. ಐಪಿಎಲ್ ಟಿ-೨೦ ಕ್ರಿಕೆಟ್; ಚೆನ್ನೈ ವಿರುದ್ಧ ರಾಯಲ್ ಚಾಲೆಂಜರ್ಸ್ ಬೆಂಗಳೂರಿಗೆ ೨ ರನ್‌ಗಳ ರೋಚಕ ಜಯ

<><*<><>*><>

ಪಹಲ್ಗಾಮ್‌ನಲ್ಲಿ ಇತ್ತೀಚೆಗೆ ನಡೆದ ಭಯೋತ್ಪಾದಕ ದಾಳಿಯ ನಂತರ, ಭಾರತವು, ಪಾಕಿಸ್ತಾನಿ ಹಡಗುಗಳು ಭಾರತೀಯ ಬಂದರುಗಳಿಗೆ ಪ್ರವೇಶಿಸುವುದನ್ನು ನಿಷೇಧಿಸಿದೆ. ಭಾರತೀಯ ಹಡಗುಗಳು ಪಾಕಿಸ್ತಾನಿ ಬಂದರುಗಳಿಗೆ ಭೇಟಿ ನೀಡುವುದನ್ನು ಸಹ ನಿಷೇಧಿಸಲಾಗಿದೆ. ಪಾಕಿಸ್ತಾನದ ಧ್ವಜವನ್ನು ಹೊಂದಿರುವ ಯಾವುದೇ ಹಡಗುಗಳು ಯಾವುದೇ ಭಾರತೀಯ ಬಂದರಿಗೆ ಭೇಟಿ ನೀಡಲು ಅನುಮತಿಸಲಾಗುವುದಿಲ್ಲ. ಭಾರತೀಯ ಧ್ವಜ ಹಡಗುಗಳು ಪಾಕಿಸ್ತಾನದ ಯಾವುದೇ ಬಂದರುಗಳಿಗೆ ಭೇಟಿ ನೀಡುವುದಿಲ್ಲ ಎಂದು ಶಿಪ್ಪಿಂಗ್ ನಿರ್ದೇಶನಾಲಯ ತಿಳಿಸಿದೆ. ಸಾರ್ವಜನಿಕ ಹಿತಾಸಕ್ತಿ, ಭಾರತೀಯ ಆಸ್ತಿಗಳು, ಸರಕು ಮತ್ತು ಸಂಪರ್ಕಿತ ಮೂಲಸೌಕರ್ಯಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ಎಂದು ಡಿಜಿಎಸ್ ತಿಳಿಸಿದೆ. ಈಗಾಗಲೇ ಭಾರತವು, ಪಾಕಿಸ್ತಾನದಿಂದ ಎಲ್ಲಾ ಸರಕುಗಳ ನೇರ ಅಥವಾ ಪರೋಕ್ಷ ಆಮದನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಿಷೇಧಿಸಿದ್ದು, ಪಾಕಿಸ್ತಾನಕ್ಕೆ ಮತ್ತು ಅಲ್ಲಿಂದ ಬರುವ ಎಲ್ಲಾ ಅಂಚೆ ಸೇವೆಗಳನ್ನು ಸಹ ಸ್ಥಗಿತಗೊಳಿಸಿದೆ.

<><*<><>*><>

ಅಂಗೋಲಾದ ಸಶಸ್ತ್ರ ಪಡೆಗಳ ಆಧುನೀಕರಣವನ್ನು ಬೆಂಬಲಿಸಲು ಭಾರತವು ೨೦೦ ಮಿಲಿಯನ್ ಡಾಲರ್ ರಕ್ಷಣಾ ಸಾಲವನ್ನು ಘೋಷಿಸಿದೆ. ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಅಂಗೋಲಾ ಅಧ್ಯಕ್ಷ ಜೊವೊ ಮ್ಯಾನುಯೆಲ್ ಗೊನ್ಸಾಲ್ವೆಸ್ ಲೂರೆಂಕೊ ನಡುವಿನ ನಿಯೋಗ ಮಟ್ಟದ ಮಾತುಕತೆಯ ನಂತರ ಈ ಘೋಷಣೆ ಮಾಡಲಾಗಿದೆ. ಸಭೆಯ ನಂತರ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಭಯೋತ್ಪಾದನೆ ಮಾನವೀಯತೆಗೆ ಗಂಭೀರ ಬೆದರಿಕೆಯಾಗಿ ಉಳಿದಿದೆ ಎಂದು ಪುನರುಚ್ಚರಿಸಿದರು. ಪಹಲ್ಗಾಮ್‌ನಲ್ಲಿ ಇತ್ತೀಚೆಗೆ ನಡೆದ ಭಯೋತ್ಪಾದಕ ದಾಳಿಯ ನಂತರ ಅಂಗೋಲಾದ ಸಂತಾಪಕ್ಕೆ ಪ್ರಧಾನಿ ಕೃತಜ್ಞತೆ ಸಲ್ಲಿಸಿದರು. ಜಂಟಿ ಪತ್ರಿಕಾ ಹೇಳಿಕೆಯಲ್ಲಿ, ಪ್ರಧಾನಿ ಭಯೋತ್ಪಾದಕರು ಮತ್ತು ಅವರ ಬೆಂಬಲಿಗರ ವಿರುದ್ಧ ದೃಢ ಮತ್ತು ನಿರ್ಣಾಯಕ ಕ್ರಮ ಕೈಗೊಳ್ಳುವ ಭಾರತದ ಬದ್ಧತೆಯನ್ನು ಒತ್ತಿ ಹೇಳಿದರು. ಗಡಿಯಾಚೆಗಿನ ಭಯೋತ್ಪಾದನೆಯನ್ನು ಎದುರಿಸುವಲ್ಲಿ ಅಂಗೋಲಾದ ಸಹಕಾರಕ್ಕೆ ಧನ್ಯವಾದ ತಿಳಿಸಿದರು. ಜಿ-೨೦ ಅಧ್ಯಕ್ಷತೆಯ ಅವಧಿಯಲ್ಲಿ ಆಫ್ರಿಕನ್ ಒಕ್ಕೂಟಕ್ಕೆ ಜಿ-೨೦ ನಲ್ಲಿ ಶಾಶ್ವತ ಸದಸ್ಯತ್ವ ನೀಡಿರುವುದು ಭಾರತಕ್ಕೆ ಹೆಮ್ಮೆಯ ವಿಷಯ ಎಂದು ಪ್ರಧಾನಿ ಹರ್ಷ ವ್ಯಕ್ತಪಡಿಸಿದರು.

<><*<><>*><>

ಮುಂಬೈನಲ್ಲಿ ನಡೆಯುತ್ತಿರುವ ವಿಶ್ವ ಶ್ರವಣ, ದೃಶ್ಯ, ಮನರಂಜನಾ ಶೃಂಗಸಭೆ - ವೇವ್ಸ್‌ನ ಕೊನೆಯ ದಿನವಾದ ಇಂದು ಚಲನಚಿತ್ರ ನಿರ್ಮಾಣ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಕುರಿತ ತರಗತಿಗಳು ಪ್ರಮುಖ ಆಕರ್ಷಣೆಯಾಗಲಿವೆ. ಗುರುವಾರ ಪ್ರಾರಂಭವಾದ ನಾಲ್ಕು ದಿನಗಳ ಈ ಶೃಂಗಸಭೆಯನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು. 'ಸೃಜನಶೀಲ ರಚನಾಕಾರರ ಸಂಪರ್ಕಿಸುವುದು, ದೇಶಗಳನ್ನು ಸಂಪರ್ಕಿಸುವುದು' ಎಂಬ ವಿಷಯದೊಂದಿಗೆ ಶೃಂಗಸಭೆಯು ಭಾರತವನ್ನು ಮಾಧ್ಯಮ, ಮನರಂಜನೆ ಮತ್ತು ಡಿಜಿಟಲ್ ನಾವೀನ್ಯತೆಗಾಗಿ ಜಾಗತಿಕ ಕೇಂದ್ರವಾಗಿ ಇರಿಸಲು ಸಜ್ಜಾಗಿದೆ. ಈ ಶೃಂಗಸಭೆಯು ೯೦ ಕ್ಕೂ ಹೆಚ್ಚು ದೇಶಗಳಿಂದ ಭಾಗವಹಿಸಿದ್ದು, ಹತ್ತು ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಳ್ಳುತ್ತಿದ್ದಾರೆ.

<><*<><>*><>

ಮುಂಬೈನಲ್ಲಿ ನಡೆದ ವೇವ್ಸ್ ಬಜಾರ್‌ನ ಉದ್ಘಾಟನಾ ಆವೃತ್ತಿ ಉತ್ತಮ ಯಶಸ್ಸಿನೊಂದಿಗೆ ಮುಕ್ತಾಯಗೊಂಡಿತು. ಸೃಜನಶೀಲ ಕೈಗಾರಿಕೆಗಳಲ್ಲಿ ಜಾಗತಿಕ ವ್ಯಾಪಾರ ಸಹಯೋಗಕ್ಕಾಗಿ ಪ್ರಮುಖ ವೇದಿಕೆಯಾಗಿ ತನ್ನ ಸ್ಥಾನಮಾನವನ್ನು ಭದ್ರಪಡಿಸಿಕೊಂಡಿತು. ಬಜಾರ್ ಚಲನಚಿತ್ರ, ಸಂಗೀತ, ರೇಡಿಯೋ, ವಿಎಫ್‌ಎಕ್ಸ್ ಮತ್ತು ಅನಿಮೇಷನ್ ವಲಯಗಳಲ್ಲಿ ೧.೦೦ ಕೋಟಿ ರೂಪಾಯಿಗಳಿಗಿಂತ ಹೆಚ್ಚು ವ್ಯಾಪಾರ ವಹಿವಾಟುಗಳನ್ನು ದಾಖಲಿಸಿದೆ. ಒಂದು ವೈಶಿಷ್ಟ್ಯವೆಂದರೆ ಖರೀದಿದಾರ-ಮಾರಾಟಗಾರರ ಮಾರುಕಟ್ಟೆ, ಇದು ೩ ಸಾವಿರಕ್ಕೂ ಹೆಚ್ಚು ಬಿ೨ಬಿ ಸಭೆಗಳನ್ನು ಆಯೋಜಿಸಿತು. ಪ್ರಮುಖ ಅಂತರರಾಷ್ಟ್ರೀಯ ಬೆಳವಣಿಗೆಯಲ್ಲಿ, ಪೆಟ್ರಿನಾ ಡಿ'ರೊಜಾರಿಯೊ ನೇತೃತ್ವದ ಫಿಲ್ಮ್ ಇಂಡಿಯಾ ಸ್ಕ್ರೀನ್ ಕಲೆಕ್ಟಿವ್ ಮತ್ತು ಸ್ಕ್ರೀನ್ ಕ್ಯಾಂಟರ್ಬರಿ ನ್ಯೂಜಿಲೆಂಡ್‌ನಲ್ಲಿ ಮೊದಲ ಬಾರಿಗೆ ಭಾರತೀಯ ಚಲನಚಿತ್ರೋತ್ಸವವನ್ನು ಪ್ರಾರಂಭಿಸುವ ಪ್ರಸ್ತಾಪಿಸಲಾಯಿತು.. ಈ ಉಪಕ್ರಮ, ಸಾಂಸ್ಕೃತಿಕ ಸಂಬಂಧಗಳನ್ನು ಬಲಪಡಿಸುವುದು, ಪ್ರವಾಸೋದ್ಯಮವನ್ನು ಹೆಚ್ಚಿಸುವುದು ಮತ್ತು ಉಭಯ ರಾಷ್ಟ್ರಗಳ ನಡುವೆ ಸಹ-ನಿರ್ಮಾಣಗಳನ್ನು ಬೆಳೆಸುವ ಗುರಿಯನ್ನು ಹೊಂದಿದೆ.

<><*<><>*><>

ದೇಶದ ಐದು ಸಾವಿರಕ್ಕೂ ಹೆಚ್ಚು ಕೇಂದ್ರಗಳಲ್ಲಿ ಮತ್ತು ವಿದೇಶದ ೧೩ ನಗರಗಳಲ್ಲಿ ಇಂದು ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ- ನೀಟ್ ಯುಜಿ -೨೦೨೫ ಅನ್ನು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ - ಎನ್‌ಟಿಎ ನಡೆಸಲಿದೆ. ಸುರಕ್ಷಿತ ಮತ್ತು ಸುಭದ್ರವಾಗಿ ಪರೀಕ್ಷೆ ನಡೆಸಲು ಎಲ್ಲಾ ಸಿದ್ಧತೆಗಳು ಕೈಗೊಳ್ಳಾಗಿದೆ ಎಂದು ಎನ್‌ಟಿಎ ತಿಳಿಸಿದೆ. ಮಧ್ಯಾಹ್ನ ೨ ರಿಂದ ಸಂಜೆ ೫ ರವರೆಗೆ ನಡೆಯಲಿರುವ ಪರೀಕ್ಷೆಗೆ ೨೨ ಲಕ್ಷ ೭೦ ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. ನೀಟ್ ಪರೀಕ್ಷಾ ವಿಷಯದ ಲಭ್ಯತೆಯ ಬಗ್ಗೆ ಆಧಾರರಹಿತ ವದಂತಿಗಳ ಹರಡುವಿಕೆಯನ್ನು ತಡೆಯಲು, ಎನ್‌ಟಿಎ ತನ್ನ "ಅನುಮಾನಾಸ್ಪದ ಹಕ್ಕುಗಳ ಪೋರ್ಟಲ್" ಮೂಲಕ ವರದಿಯಾದ ಪ್ರಕರಣಗಳನ್ನು ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರದೊಂದಿಗೆ ಕೈಗೆತ್ತಿಕೊಂಡಿದೆ. ಇದರ ಪರಿಣಾಮವಾಗಿ, ಸುಳ್ಳು ಮಾಹಿತಿಯನ್ನು ಪ್ರಸಾರ ಮಾಡುವ ೧೬೫ ಕ್ಕೂ ಹೆಚ್ಚು ಟೆಲಿಗ್ರಾಮ್ ಚಾನೆಲ್‌ಗಳು ಮತ್ತು ೩೨ ಕ್ಕೂ ಹೆಚ್ಚು ಇನ್‌ಸ್ಟಾಗ್ರಾಮ್ ಖಾತೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದು ಎನ್‌ಟಿಎ ತಿಳಿಸಿದೆ. ಎಲ್ಲಾ ಅಭ್ಯರ್ಥಿಗಳು ಮತ್ತು ಅವರ ಪೋಷಕರು ಜಾಗರೂಕರಾಗಿರಲು ಎನ್‌ಟಿಎ ಮನವಿ ಮಾಡಿದೆ.

<><*<><>*><>

ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಪಹಲ್ಗಾಮ್ ಭಯೋತ್ಪಾದಕ ದಾಳಿಯ ಕುರಿತಂತೆ ರಷ್ಯಾದ ವಿದೇಶಾಂಗ ಸಚಿವ ಸೆರ್ಗೆಯ್ ಲಾವ್ರೊವ್ ಅವರೊಂದಿಗೆ ಚರ್ಚಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಡಾ.ಎಸ್.ಜೈಶಂಕರ್, ಭಯೋತ್ಪಾದಕ ದಾಳಿಯ ಅಪರಾಧಿಗಳು, ಬೆಂಬಲಿಗರು ಮತ್ತು ಯೋಜಕರನ್ನು ಶಿಕ್ಷೆಗೆ ಒಳಪಡಿಸಬೇಕು ಎಂಬುದರ ಕುರಿತು ಚರ್ಚಿಸಲಾಗಿದೆ. ಇದೇ ವೇಳೆ ಭಾರತ-ರಷ್ಯಾದ ದ್ವಿಪಕ್ಷೀಯ ಸಹಕಾರ ಚಟುವಟಿಕೆಗಳ ಬಗ್ಗೆಯೂ ಚರ್ಚೆ ನಡೆಯಿತು ಎಂದಿದ್ದಾರೆ.

<><*<><>*><>

ಭಾರತೀಯ ರೈಲ್ವೆಯು ಚಾರ್ ಧಾಮ್ ಯಾತ್ರೆಗಾಗಿ ಭಾರತ್ ಗೌರವ್ ಡಿಲಕ್ಸ್ ರೈಲನ್ನು ಪರಿಚಯಿಸಿದೆ. ಈ ರೈಲು ಬದರಿನಾಥ್, ಜೋಶಿಮಠ, ಋಷಿಕೇಶ, ಪುರಿ, ಕೋನಾರ್ಕ್, ರಾಮೇಶ್ವರಂ, ದ್ವಾರಕಾ ಮುಂತಾದ ಧಾರ್ಮಿಕ ಸ್ಥಳಗಳನ್ನು ಒಳಗೊಂಡಂತೆ ಕಾಶಿ ವಿಶ್ವನಾಥ, ಭೀಮಶಂಕರ್, ತ್ರ್ಯಂಬಕೇಶ್ವರ ಮುಂತಾದ ಇತರ ಧಾರ್ಮಿಕ ಸ್ಥಳಗಳನ್ನು ಒಳಗೊಂಡಿದೆ. ರೈಲು ಒಟ್ಟು ೮ ಸಾವಿರದ ೪೨೫ ಕಿಲೋಮೀಟರ್ ದೂರವನ್ನು ಕ್ರಮಿಸಲಿದೆ. ವಿಶೇಷ ರೈಲು ಈ ತಿಂಗಳ ೨೭ ರಂದು ದೆಹಲಿಯ ಸಫ್ದರ್ಜಂಗ್ ರೈಲು ನಿಲ್ದಾಣದಿಂದ ಹೊರಟು ೧೭ ದಿನಗಳಲ್ಲಿ ದೇಶದ ನಾಲ್ಕು ಧಾಮಗಳು ಮತ್ತು ಇತರ ಧಾರ್ಮಿಕ ಸ್ಥಳಗಳನ್ನು ಒಳಗೊಂಡಿದೆ. ರೈಲಿನ ಟಿಕೆಟ್‌ಗಳನ್ನು ಮೊದಲು ಬಂದವರಿಗೆ ಆದ್ಯತೆ ಆಧಾರದ ಮೇಲೆ ನೀಡಲಾಗುತ್ತದೆ. ಐಆರ್‌ಸಿಟಿಸಿ ವೆಬ್‌ಸೈಟ್‌ನಲ್ಲಿ ಬುಕ್ ಮಾಡಬಹುದು.

<><*<><>*><>

ಸಿಂಗಾಪುರದ ದೀರ್ಘಕಾಲ ಆಡಳಿತ ನಡೆಸುತ್ತಿದ್ದ ಪೀಪಲ್ಸ್ ಆಕ್ಷನ್ ಪಾರ್ಟಿ ಸಾರ್ವತ್ರಿಕ ಚುನಾವಣೆಯಲ್ಲಿ ಮತ್ತೊಂದು ಭರ್ಜರಿ ಜಯ ಸಾಧಿಸಿದೆ. ಅದರ ೬೬ ವರ್ಷಗಳ ಆಳ್ವಿಕೆಯನ್ನು ವಿಸ್ತರಿಸಿತು. ಮತ ಎಣಿಕೆ ಮುಗಿದ ನಂತರ ಪ್ರಧಾನಿ ಲಾರೆನ್ಸ್ ವಾಂಗ್ ಅವರ ಪಿಎಪಿ ೮೨ ಸಂಸದೀಯ ಸ್ಥಾನಗಳನ್ನು ಗೆದ್ದಿದೆ ಎಂದು ಚುನಾವಣಾ ಇಲಾಖೆ ಘೋಷಿಸಿದೆ. ಪಿಎಪಿ ಐದು ಹೆಚ್ಚುವರಿ ಸ್ಥಾನಗಳು ಅವಿರೋಧವಾಗಿ ಜಯಿಸುವುದರೊಂದಿಗೆ ಪಕ್ಷ ೯೭ ಸ್ಥಾನಗಳಲ್ಲಿ ಒಟ್ಟು ೮೭ ಸ್ಥಾನಗಳನ್ನು ಪಡೆದರು. ವಿರೋಧ ಪಕ್ಷದ ವರ್ಕರ್ಸ್ ಪಾರ್ಟಿ ತನ್ನ ೧೦ ಸ್ಥಾನಗಳನ್ನು ಉಳಿಸಿಕೊಂಡಿತು. ಪಿಎಪಿಯ ಮತಗಳ ಗಳಿಕೆ ಶೇಕಡಾ ೬೫.೬ ಕ್ಕೆ ಏರಿತು, ಇದು ೨೦೨೦ ರ ಸಮೀಕ್ಷೆಗಳಲ್ಲಿ ಶೇ. ೬೧ ರ ದಾಖಲೆಯ ಕನಿಷ್ಠ ಮಟ್ಟದಿಂದ ಹೆಚ್ಚಾಗಿದೆ.

<><*<><>*><>

ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಳೆದ ರಾತ್ರಿ ನಡೆದ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು, ಚೆನ್ನೈ ಸೂಪರ್ ಕಿಂಗ್ಸ್ ತಂಡದ ವಿರುದ್ಧ ೨ ರನ್‌ಗಳ ರೋಚಕ ಜಯ ದಾಖಲಿಸಿದೆ. ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಬೆಂಗಳೂರು ತಂಡ ನಿಗದಿತ ೨೦ ಓವರ್‌ಗಳಲ್ಲಿ ೫ ವಿಕೆಟ್ ನಷ್ಟಕ್ಕೆ ೨೧೩ ರನ್ ಗಳಿಸಿತು. ಆರ್‌ಸಿಬಿ ಪರ ವಿರಾಟ್ ಕೋಹ್ಲಿ ೬೨, ಜಾಕೊಬ್ ಬೆಥೆಲ್ ೫೫ ಹಾಗೂ ರೊಮಾರಿಯೋ ಶೆಪರ್ಡ್ ಕೇವಲ ೧೪ ಎಸೆತಗಳಲ್ಲಿ ಸಿಡಿಸದ ೫೩ ರನ್ ತಂಡ ಬೃಹತ್ ಗುರಿ ನೀಡಲು ನೆರವಾಯಿತು. ಪ್ರತ್ಯುತ್ತರವಾಗಿ ೨೧೪ ರನ್‌ಗಳ ಗುರಿ ಬೆನ್ನತ್ತಿದ ಚೆನ್ನೈ ಸೂಪರ್ ಕಿಂಗ್ಸ್, ಆಯುಶ್ ಮ್ಹಾತ್ರೆ ಅವರ ೯೪ ಮತ್ತು ರವಿಂದ್ರ ಜಡೇಜಾ ಅವರ ೭೭ ರನ್ ಗಳ ಉತ್ತಮ ಪ್ರದರ್ಶನದ ನಡುವೆಯೂ, ನಿಗದಿತ ೨೦ ಓವರ್‌ಗಳಲ್ಲಿ ೫ ವಿಕೆಟ್ ನಷ್ಟಕ್ಕೆ ೨೧೧ ರನ್ ಗಳಿಸಲಷ್ಟೇ ಶಕ್ತವಾಯಿತು. ಇಂದು ಎರಡು ಪಂದ್ಯಗಳು ನಡೆಯುತ್ತಿದ್ದು, ಕೋಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ನಡೆಯಲಿರುವ ದಿನದ ಮೊದಲ ಪಂದ್ಯದಲ್ಲಿ ಕೋಲ್ಕತ್ತಾನೈಟ್ ರೈಡರ್ಸ್ ಹಾಗೂ ರಾಜಸ್ಥಾನ್ ರಾಯಲ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಮಧ್ಯಾಹ್ನ ೩.೩೦ ಕ್ಕೆ ಆರಂಭವಾಗಲಿದೆ. ಧರ್ಮಶಾಲಾದಲ್ಲಿ ನಡೆಯಲಿರುವ ದಿನದ ಎರಡನೇ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡ, ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಎದುರಿಸಲಿದೆ. ಪಂದ್ಯ ಸಂಜೆ ೭.೩೦ ಕ್ಕೆ ಆರಂಭವಾಗಲಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ <>*><>**